O.S.No.419/2017
PW -1

ದಿನಾಂಕ 13/09/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು :- ಶ್ರೀ ಪಿ.ಸಿ.ಕೆ.ಆರ್. 6 ನೇ ಪ್ರತಿವಾದಿ ಪರ ವಕೀಲರಿಂದ**

ದಾವಾ ಆಸ್ತಿ ಹೊರತುಪಡಿಸಿ ಉಳಿದ ಆಸ್ತಿಗಳು ಭಾಗ ಆಗಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸದರಿ ಭಾಗದಲ್ಲಿ ಯಾರು ಯಾರಿಗೆ ಎಷ್ಟು ಆಸ್ತಿಗಳು ಬಂದಿರುತ್ತವೆ ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ವಿಭಾಗ ಪತ್ರದ ಆಧಾರದ ಮೇಲೆ ನಮ್ಮ ಹೆಸರಿಗೆ ಖಾತೆ ಪಹಣಿ ಆಗಿರುತ್ತದೆ ಎಂದರೆ ಸರಿ. ಸದರಿ ಪತ್ರದಲ್ಲಿ ಯಾರು ಯಾರಿಗೆ ಎಷ್ಟು ಆಸ್ತಿಗಳು ಬಂದಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ನಮ್ಮ ತಾತ ಮೌಖಿಕವಾಗಿ ಖರೀದಿಸಿದ್ದು, ಮೂಲತಃ ಸದರಿ ಆಸ್ತಿ ಎಂ.ಎಲ್ ನಂಜಪ್ಪ ಇವರಿಗೆ ಸೇರಿತ್ತದೆ. 1984 ನೇ ಸಾಲಿನಲ್ಲಿ ಭಾಗ ಮಾಡಿಕೊಂಡಿರುತ್ತೇವೆ. ಸದರಿ ಭಾಗ ಮಾಡಿಕೊಂಡ ದಿನಾಂಕ, ತಿಂಗಳು ಗೊತ್ತಿರುವುದಿಲ್ಲ. ಭಾಗ ಮಾಡಿಕೊಂಡ ಆಸ್ತಿಗಳು ಕರಿಯಣ್ಣನ ಆಸ್ತಿಗಳು ಆಗಿರುವುದಿಲ್ಲ ಆತನ ಹೆಂಡತಿ ಆಸ್ತಿಗಳು ಎಂದರೆ ಸರಿ. ದಾವಾ ಆಸ್ತಿ ನಮ್ಮ ಅಜ್ಜಿಯ ಕಡೆಯಿಂದ ಬಂದ ಆಸ್ತಿ ಇರುತ್ತದೆ ಎಂದರೆ ಸರಿ. ನಮ್ಮ ಅಜ್ಜಿ ಎಲ್ಲಾ ಆಸ್ತಿಗಳನ್ನು ಗೋಪಾಲಪ್ಪ ಇವರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ಚಿಕ್ಕಪ್ಪ 1960 ರಲ್ಲಿ ಪ್ರತ್ಯೇಕವಾಗಿ ವಾಸ ಇದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿ ಗೋಪಾಲಪ್ಪನ ಹೆಸರಿನಲ್ಲಿ ಇದ್ದವು ಎಂದರೆ ಸರಿ. ನಾವು ಭಾಗ ಮಾಡಿಕೊಂಡ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ . ದಾವಾ ಆಸ್ತಿಗಳು 1984 ನೇ ಸಾಲಿನಲ್ಲಿ ಭಾಗ ಆಗಿದ್ದು ಎಂದರೆ ಸರಿಯಲ್ಲ.

2. ದಾವಾ ಆಸ್ತಿ ಗೋಪಾಲಪ್ಪನವರ ಸ್ವಯಾರ್ಜಿತ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಅಜ್ಜಿ ತಾತನ ಕಡೆಯಿಂದ ಬಂದಿರುತ್ತದೆ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿಯಲ್ಲಿ ಒಟ್ಟು ಕುಟುಂಬದಿಂದ ಖರೀದಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಗೊಪಾಲಪ್ಪ

ಅನುಭವಿಸುತ್ತಿದ್ದಾರೆ ಎಂದರೆ ಸಾಕ್ಷಿ ನಾವೆಲ್ಲರೂ ಒಟ್ಟಾಗಿ ಅನುಭವಿಸುತ್ತಾ ಇದ್ದೇವೆ ಎಂದು ಉತ್ತರಿಸಿರುತ್ತಾರೆ. ಗೋಪಾಲಪ್ಪನ ಹೆಸರಿಗೆ ಖಾತೆ ಪಹಣಿ ಬರುತ್ತಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮಗೆ ಮೋಸಮಾಡುವ ಉದ್ದೇಶದಿಂದ ಖಾತೆ ಬದಲಾವಣೆ ಮಾಡಿಕೊಟ್ಟಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಗೋಪಾಲಪ್ಪ ಮೃತಪಟ್ಟ ನಂತರ ರಾಮಕೃಷ್ಣಪ್ಪ ರವರ ಹೆಸರಿಗೆ ಖಾತೆ ಬದಲಾವಣಿ ಆಗಿರುತ್ತದೆ ಎಂದರೆ ಸಾಕ್ಷಿ ಮೋಸದಿಂದ ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾನು ಖಾತೆ ಬದಲಾವಣೆಯನ್ನು ಸಮಕ್ಷಮ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪೋಡು ಆದ ಕಾರಣ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಗೋಪಾಲಪ್ಪ ತೀರಿಕೊಂಡ ನಂತರ ರಾಮಕೃಷ್ಣಪ್ಪ ರವರ ಹೆಸರಿಗೆ ಮುಟೇಷನ್ ಆಗಿರುತ್ತದೆ ಎಂದರೆ ಸಾಕ್ಷಿ ಮೋಸದಿಂದ ಮಾಡಿಸಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿ ಗೋಪಾಲಪ್ಪನ ಸ್ವಯಾರ್ಜಿತ ಆಸ್ತಿ ಆಗಿರುವುದರಿಂದ ನಮಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ನಾವು ಭಾಗ ಮಾಡಿಕೊಂಡ ವಿಭಾಗ ಪತ್ರದಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ . ನಾವು ದಾವಾ ಆಸ್ತಿಯನ್ನು ಸರ್ವೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಮತ್ತು ಭಾಗ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಪಿತ್ರ್ರಾಜಿತ ಆಸ್ತಿ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಸರ್ವೆ ಕಾರ್ಯ ನಡೆಯದೇ ಇರುವ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿ ಈಗಾಗಲೇ ಪೋಡು ಆಗಿದ್ದು ಮತ್ತೆ ಪೋಡು ಆಗುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ.

ನಮ್ಮ ಅಜ್ಜಿಗೆ ಮೌಖಿಕವಾಗಿ ದಾವಾ ಆಸ್ತಿ ಬಂದಿರುತ್ತದೆ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು - 1 ರಿಂದ 5 ನೇ ಪ್ರತಿವಾದಿಗಳು ಗೈರು ಹಾಜರಿದ್ದು ಹಾಗೂ ಯಾವುದೇ ಪ್ರತಿವಾದ ಪತ್ರ ಸಲ್ಲಿಸದ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ